ಹೇಳಿದ್ದೇವೆ. ತಾವೂ ಕೂಡ ಹೇಳಿದ್ದೀರಿ. ಪ್ರಶ್ನೋತ್ತರಗಳನ್ನು ಮೊದಲು ತೆಗೆದುಕೊಂಡು ನಂತರ ಈ ಚರ್ಚೆಗೆ ಅವಕಾಶ ಕೊಡಲಾಗುವುದು ಎಂದು. ಆದರೂ ಕೂಡ, ಇದು ಏಕೋ ಆಗಲೇಬೇಕೆಂದು ಇದೆ. ನಾನು ಅಧ್ಯಕ್ಷರಿಗೆ ಮನವಿ ಮಾಡಿಕೊಳ್ಳುತ್ತೇನೆ. ತಾವು ಯಾವ ರೀತಿಯಾಗಿ, ಯಾವ ನಿಯಮದಡಿ ಚರ್ಚೆಗೆ ಅವಕಾಶ ಕೊಡಬೇಕೆಂಬುದನ್ನು ನಿರ್ಧಾರ ಮಾಡಿ. ಆದರ ಬಗ್ಗೆ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ.

### 3) ಅಧ್ಯಕ್ಷರ ತೀರ್ಪು

### ಪ್ರಶ್ನೋತ್ತರಗಳ ನಂತರ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿಕೆ

**ಅಧ್ಯಕ್ಷರು** : ನಿಯಮಾವಳಿಗಳ ಪ್ರಕಾರ ಪ್ರಶ್ನೋತ್ತರವಾದ ಮೇಲೆ ನಿಲುವಳಿ ಸೂಚನೆಯನ್ನು ತೆಗೆದುಕೊಂಡು ನಿಮಗೆ ಅವಕಾಶ ಕೊಡುತ್ತೇನೆಂದು ನಾನು ಹೇಳಿದ್ದೆ. ಈಗ ಮಾನ್ಯ ಸಭಾ ನಾಯಕರು ನಾವು ಯಾವುದೇ ಚರ್ಚೆಗೆ ಒಪ್ಪಿದ್ದೇವೆಂದು ಹೇಳಿದ್ದಾರೆ. ಆ ಕಾರಣದಿಂದ ಈಗ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಂಡು ನಿಲುವಳಿ ಸೂಚನೆಯನ್ನು ತಳ್ಳಿ ಹಾಕಿ ನಿಯಮ 69ರ ಅಡಿಯಲ್ಲಿ ಪ್ರಶ್ನೋತ್ತರ ಆದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ.

ಗೊಂದಲ

**Mr. Speaker** : Ruling has been given. ದಯಮಾಡಿ, ಎಲ್ಲರೂ ತಮ್ಮ ತಮ್ಮ ಆಸನಗಳಿಗೆ ಹೋಗಿ ಕುಳಿತುಕೊಳ್ಳಬೇಕು ಮತ್ತು ಸಹಕರಿಸಬೇಕು.

**ಶ್ರೀ ಆರಗ ಜ್ಞಾನೇಂದ್ರ** : ನಾವು ನಿಮ್ಮನ್ನು ಕನ್‌ವಿನ್ಸ್ ಮಾಡಬೇಕಲ್ಲಾ ಸಾರ್. ಈ ನಿಲುವಳಿ ಸೂಚನೆ ಬಗ್ಗೆ ಕನ್‌ವಿನ್ಸ್ ಮಾಡಬೇಕಾಗಿದೆ. ಸರ್ಕಾರವೂ ಒಪ್ಪಿದೆ, ವಿರೋಧ ಪಕ್ಷವೂ ಒಪ್ಪಿದೆ.

ಗೊಂದಲ

**ಅಧ್ಯಕ್ಷರು** : ಪ್ರಶ್ನೋತ್ತರ ವೇಳೆಯಾದ ಮೇಲೆ ಎಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ.

### 4) ಅಧ್ಯಕ್ಷರ ತೀರ್ಪನ್ನು ಪುನರ್ ಪರಿಶೀಲನೆ ಮಾಡಲು ಮನವಿ ನಿಲುವಳಿ ಸೂಚನೆ ಬದಲಿಗೆ ನಿಯಮ 69ರ ಮೇಲೆ ಚರ್ಚೆಗೆ ಅವಕಾಶ ನೀಡಿದ್ದರ ಬಗ್ಗೆ

**ಶ್ರೀ ಆರಗ ಜ್ಞಾನೇಂದ್ರ** : ಪ್ರಿಲಿಮಿನರಿ ಸಬ್‌ಮಿಷನ್ ಆದ ಮೇಲೆ ಯಾವ ರೂಲ್ಸ್ ಮೇಲೆ ಚರ್ಚೆ ಮಾಡಬೇಕೆಂದು ತಾವು ನಿರ್ಧಾರ ಮಾಡಬೇಕಾಗುತ್ತದೆ. ದಯವಿಟ್ಟು ಪುನರ್ ಪರಿಶೀಲನೆ ಮಾಡಿ, ಪ್ರಶ್ನೋತ್ತರವನ್ನು ಬದಿಗೊತ್ತಿ ಈ ವಿಷಯವನ್ನು ಮೊದಲು ತೆಗೆದುಕೊಳ್ಳಿ.

**ಅಧ್ಯಕ್ಷರು** : ಒಂದು ವಿಷಯವನ್ನು ತಾವು ದಯಮಾಡಿ ತಿಳಿದುಕೊಳ್ಳಿ. ಸಭೆ ಯುನಾನಿಮಸ್ ಆಗಿ ಏನಾದರೂ ಒಪ್ಪಿಕೊಂಡರೆ, ಪ್ರಶ್ನೋತ್ತರ ವೇಳೆಯನ್ನು ರದ್ದು ಮಾಡಿ, ಇದನ್ನು ತೆಗೆದುಕೊಳ್ಳಲು ನನ್ನದು ಅಭ್ಯಂತರ ಇಲ್ಲ. ಇಲ್ಲದೇ ಇದ್ದರೆ, ನಿಯಮಾವಳಿಯನ್ನು ಬಿಟ್ಟು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ಆ ಸ್ಥಾನದಲ್ಲಿ ತಾವು ಕುಳಿತಿದ್ದೀರಿ. ನಿಮ್ಮ ಬಗ್ಗೆ ನಮಗೆ ಪೂರ್ಣ ಗೌರವ ನಮಗೆ ಇದೆ. ನಿಮ್ಮ ಆದೇಶ ಅಂತಿಮ. ನಾನು ಇಷ್ಟೇ